ಅಸಲು ದಾವೆ ಸಂಖ್ಯೆ - 118/2010
ಡಿ.ಡಬ್ಲ್ಯೂ - 01
ದಿನಾಂಕಃ 23-01-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಎಂ.ಎಸ್.ಬಿ ವಕೀಲರಿಂದ**

ಇಂಡಸ್ಗೇರ್ ರವರು ಕುಂಬಾರವಾಡ ಮಸ್ಜಿದ್ ಪರವಾಗಿ ಪ್ರೋಬೇಟ್ ಪಡೆದಿದ್ದನ್ನು ಪ್ರಶ್ನಿಸಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಇದರ ಬಗ್ಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಅರ್ಜಿಯ ಸಂಖ್ಯೆ ಮಿಸ್ ನಂಬರ 369/1981 ರ ಅರ್ಜಿಯಾಗಿದ್ದು, ಅದರಲ್ಲಿ ಸದರಿ ಕೇಸಿನ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯು ಶಹಜಾದಬೇಗಂ ಬಿರಾದರರವರ ಸಹಿಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಹಿಯನ್ನು ಮಾತ್ರ ನಿಪಿ.124 ಎಂದು ಗುರುತಿಸಲಾಯಿತು.

ಎಂ.ಎಫ್ ಬಿರಾದರ ಎಂದರೆ ನಾನೇ ಆಗಿರುತ್ತೇನೆ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದು ಮಿಸ್ ನಂಬರ 369/1981 ರಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 3 ಮತ್ತು ಮಧ್ಯಂತರ ಅರ್ಜಿ 4 ರಲ್ಲಿ ಸಾಕ್ಷಿಯ ಸಹಿಯಾಗಿರುತ್ತದೆ. ಸದರಿ ಸಹಿಯನ್ನು ಗುರುತಿಸಲು ಪ್ರತಿವಾದಿ ಪರ ವಕೀಲರ ತಕರಾರನ್ನು ಮಾಡಿರುತ್ತಾರೆ. ಆದರೆ ಸದರಿ ದಾಖಲೆಯು ಪ್ರಮಾಣೀಕೃತ/ದೃಢಿಕೃತ ನಕಲು ಇರುವುದರಿಂದ ಸದರಿ ಸಹಿಗಳನ್ನು ಮಾತ್ರ ನಿಪಿ.125 ಮತ್ತು ನಿಪಿ.126 ಎಂದು ಗುರುತಿಸಲಾಯಿತು.

ಶಹಜಾದಬೇಗಂ ರವರು ವ್ಯಕ್ತಿಯಕವಾಗಿ ಸಲ್ಲಿಸಿದ ದಾವೆಗಳಲ್ಲಿ ನೀವು ಅವರ ಮೊಕ್ತಿಯಾರನಾಮಾನಾಗಿ ದಾವೆಗಳಲ್ಲಿ/ಅರ್ಜಿಗಳಲ್ಲಿ ಪ್ರತಿನಿಧಿಸಿರುತ್ತೀರಿ ಎಂದರೆ ಎಲ್ಲಾ ದಾವೆಗಳಲ್ಲು ಪ್ರತಿನಿಧಿಸಿರುವುದಿಲ್ಲ, ಕೆಲವು ದಾವೆಗಳಲ್ಲಿ ಮಾತ್ರ ಪ್ರತಿನಿಧಿಸಿರುತ್ತೇನೆ.

ಸಾಕ್ಷಿಗೆ ಮಿಸ್ ನಂಬರ 369/1981 ರಲ್ಲಿ ಅರ್ಜಿ ನಂಬರ 3 ಮತ್ತು 4 ರ ಪ್ರಮಾಣ ಪತ್ರದಲ್ಲಿ ಸಾಕ್ಷಿಯು ಮೊಕ್ತಿಯಾರನಾಮಾನಾಗಿ ಪ್ರಮಾಣ ಪತ್ರ ಸಲ್ಲಿಸಿದ್ದು, ಅದನ್ನು ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಹೌದು ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಕ್ರಮವಾಗಿ ನಿಪಿ.125(ಎ) ಮತ್ತು ನಿಪಿ.126(ಎ) ಎಂದು ಗುರುತಿಸಲಾಯಿತು.

ಕುಂಬಾರವಾಡರವರು ವಿಲ್ ಮೇಲೆ ಪಡೆದ ಪ್ರೋಬೇಟ್ ಆದೇಶವನ್ನು ಪ್ರಶ್ನಿಸಿ ಸಾಜಿದಾ ಬೇಗಂ ರವರು ಮತ್ತು ಇತರರು ಸಲ್ಲಿಸಿದ ಮಿಸ್ ನಂಬರ 369/1981 ರ ಅರ್ಜಿಯಲ್ಲಿ ಸಾಜಿದಾಬೇಗಂ ಮತ್ತು ಇತರೆ ಅರ್ಜಿದಾರರ ಮೊಕ್ತಿಯಾರನಾಮಾನಾಗಿ ದಾವೆಯನ್ನು ನಡೆಸುತ್ತಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ಹಾಗಾದರೆ ಆ ಅರ್ಜಿಯಲ್ಲಿ ನೀವು ಸಾಜಿದಾಬೇಗಂ ಮತ್ತು ಇತರರ ಮೊಕ್ತಿಯಾರನಾಮಾನಾಗಿ ಯಾವುದೇ ಮಧ್ಯಂತರ ಅರ್ಜಿಗಳಿಗೆ ಸಹಿ ಮಾಡಿರುವುದಿಲ್ಲವಾ ಎಂದರೆ ನನಗೆ ನೆನಪು ಇರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಒಂದು ವೇಳೆ ಸದರಿ ಅರ್ಜಿಗಳನ್ನು ನೋಡಿದರೆ ಏನಾದರು ನಿಮಗೆ ನೆನಪಾಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಮತ್ತು ಅದರ ಬಗ್ಗೆ ನಾನು ಏನು ಹೇಳುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಸಾಜಿದಾಬೇಗಂ ಮತ್ತು ಇತರರು ಸಲ್ಲಿಸಿದ ಮಿಸ್ ನಂಬರ 369/1981 ಅರ್ಜಿಯು ಏನಾಯಿತು ಎಂದು ಇಲ್ಲಿಯವರೆಗೆ ನೀವು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ಕುಂಬಾರವಾಡಿ ಮಸ್ಜಿದ್, ಇಂಡಸ್ಗೇರಿ ಮತ್ತು ಶಹಾಜಾದ ಬೇಗಂ ರವರ ನಡುವೆ ರಾಜಿಯಾಗಿರುತ್ತದೆ ಎಂದರೆ ಸಾಕ್ಷಿಯು ಒಂದು ಆಸ್ತಿಯ ನಡುವೆ ರಾಜಿಯಾಗಿರುತ್ತದೆ, ಮುಂದುವರೆದು ಅದರ ಬಗ್ಗೆ ನನಗೆ ನೆನಪು ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

Revocation of probate ಕುರಿತು ಕುಂಬಾರವಾಡಿ ಮಸ್ಜಿದ್ ರವರು ಸುಳ್ಳು ವಿಲ್ ಅನ್ನು ಸೃಷ್ಟಿಸಿ ಖೊಟ್ಟಿ ಸಹಿ ಮಾಡಿ ಆದೇಶ ಪಡೆದಿದ್ದನ್ನು ಸಾಜಿದಾ ಬೇಗಂ ಮತ್ತು ಇತರರು ಪ್ರಶ್ನಿಸಿ ಅರ್ಜಿ ಸಲ್ಲಿಸಿದ್ದರು ಎಂದರೆ ಸುಳ್ಳು ಇರುತ್ತದೆ.

ಸಿ.ಟಿ ಸರ್ವೇ ನಂಬರ 184 ಕ್ಕೆ ಸಂಬಂಧಪಟ್ಟಂತೆ ಕುಂಬಾರವಾಡಿ ಮಸ್ಜಿದ್ ರವರೊಂದಿಗೆ ನೀವು ರಾಜಿಯಾಗಿರುತ್ತೀರಿ ಎಂದರೆ ನನಗೆ ನೆನಪು ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಈ ದಾವೆಯಲ್ಲಿ ವಾದಿಯರು ಸಲ್ಲಿಸಿದ ಮತ್ತು ಪ್ರತಿವಾದಿಯಹುರು ಸಲ್ಲಿಸಿದ ದಾಖಲಾತಿಗಳ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಕೆಲವು ದಾಖಲಾತಿಗಳ ಬಗ್ಗೆ ಮಾಹಿತಿ ಇದೆ ಮತ್ತು ಕೆಲವುದರ ಬಗ್ಗೆ ದಾಖಲೆಯನ್ನು ನೋಡಿ ಉತ್ತರ ಹೇಳುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ.

ಕುಂಬಾರವಾಡ ಮಸ್ಜಿದ್ ಮತ್ತು ಸಾಜಿದಾಬೇಗಂ ರವರ ನಡುವೆ ಸಿ.ಟಿ ಸರ್ವೇ ನಂಬರ 184 ರಲ್ಲಿ ಆದ ರಾಜಿ ಪತ್ರವನ್ನು ತೋರಿಸಿದರೆ ನೀವು ಅದನ್ನು ಗುರುತಿಸುತ್ತೀರಾ ಎಂದರೆ ಅದರ ಬಗ್ಗೆ ನಾನು ಏನು ಹೇಳುವುದಿಲ್ಲ, ಒಂದು ವೇಳೆ ಅವರು ದಾಖಲೆಯನ್ನು ಹಾಜರು ಮಾಡಿದರೆ ಹಾಜರು ಮಾಡಲಿ ಎಂದು ಸಾಕ್ಷಿಯು ನುಡಿಯುತ್ತಾರೆ.

ಮಿಸ್ ನಂಬರ 369/1981 ರ ನ್ಯಾಯಾಲಯದ ಸಂಪೂರ್ಣ ಕಡತಗಳನ್ನು ತರಿಸಿದರೆ ಅದಕ್ಕೆ ನಿಮ್ಮದು ಏನು ತಕರಾರು ಇರುವುದಿಲ್ಲ ಎಂದರೆ ಸಾಕ್ಷಿಯು ತಕರಾರು ಇರುವುದಿಲ್ಲ ಎಂದು ನುಡಿಯುತ್ತಾರೆ.

ಈ ದಾವೆಯಲ್ಲಿ ಈಗಾಗಲೇ ನಿಮ್ಮ ಪಾಟೀ ಸವಾಲಿನಲ್ಲಿ ನಿಮಗೆ ಕೆಲವು ನ್ಯಾಯಾಲಯದ ದೃಢಿಕೃತ ನಕಲುಗಳನ್ನು ತೋರಿಸಿದ್ದು, ಅದನ್ನು ನೀವು ನಿರಾಕರಿಸಿದ್ದು ಇರುತ್ತದೆ ಎಂದರೆ ಸಾಕ್ಷಿಯು ನಾನು ದಾಖಲೆಗಳನ್ನು ಪರಿಶೀಲಿಸಿ ನನಗೆ ಗೊತ್ತಿರುವುದನ್ನು ನಾನು ಒಪ್ಪಿಕೊಂಡಿರುತ್ತೇನೆ ಮತ್ತು ನನಗೆ ಸಂಬಂಧ ಇಲ್ಲದೇ ಇರುವುದನ್ನು ನಾನು ಒಪ್ಪುವುದಿಲ್ಲ ಎಂದು ನುಡಿದಿರುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ.

ಈ ದಾವೆಯಲ್ಲಿ ಸಾಜಿದಾಬೇಗಂ ರವರು ಹೂಡಿದ ದಾವೆಗಳ ದಾಖಲೆಗಳು, ಮತ್ತು ಎ.ಸಿ, ಡಿ.ಸಿ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರತಿಗಳು ಮತ್ತು ಕುಂಬಾರವಾಡ ರವರಿಗೆ ಸಂಬಂಧಪಟ್ಟ ದಾಖಲೆಗಳು ಇರುತ್ತವೆ ಎಂದರೆ ಸಾಕ್ಷಿಯು ದಾವೆಗಳು, ಎ.ಸಿ, ಡಿ.ಸಿ ಮತ್ತು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಪ್ರತಿಗಳು, ಗೆಜೆಟ್ ನೋಟಿಫಿಕೇಶನ್ ಗಳು ಇರುತ್ತವೆ. ಆದರೆ ಕುಂಬಾರವಾಡ ಮಸ್ಜಿದ್ ರವರಿಗೆ ಸಂಬಂಧಪಟ್ಟ ದಾಖಲೆಗಳು ಇರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

ಸಿ.ಟಿ ಸರ್ವೇ ನಂಬರ 184 ಮೂಲತಃ ನವಾಬರವರಿಗೆ ಸಂಬಂಧಪಟ್ಟಿದ್ದು ಇರುತ್ತದೆ ಎಂದರೆ ನವಾಜಖಾತುರವರಿಗೆ ಸಂಬಂಧಚಿಪ್ಪ ಆಸ್ತಿಯಾಗಿರುತ್ತದೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ಸಿ.ಟಿ ಸರ್ವೇ ನಂಬರ 184 ಆಸ್ತಿ ನವಾಜಖಾತುರವರಿಗೆ ಹೇಗೆ ಬಂದಿತು ಎಂದರೆ ಅವರ ಅಣ್ಣ ಮಹೆಬೂಬ ಅಲಿಖಾನರವರ ಮುಖಾಂತರ ಬಂದಿರುತ್ತದೆ ಎಂದು ಸಾಕ್ಷಿಯು ನುಡಿಯುತ್ತಾರೆ.

ಮಿಸ್ ನಂಬರ 369/1981 ಅರ್ಜಿಯನ್ನು ಸಾಜಿದಾಬೇಗಂ ರವರು ಸಂಪೂರ್ಣವಾಗಿ ನಡೆಸಿರುವುದಿಲ್ಲ ಎಂದರೆ ಅದರ ಬಗ್ಗೆ ನನಗೆ ನೆನಪು ಇರುವುದಿಲ್ಲ ಎಂದು ಸಾಕ್ಷಿಯು

ನುಡಿಯುತ್ತಾರೆ. ಸದರಿ ಮಿಸ್ ನಂಬರ 369/1981 ಅರ್ಜಿಯಲ್ಲಿ ಏನಾದರು ಅಂತಿಮ ಆದೇಶವಾಯಿತೋ ಅಥವಾ ಸಾಜಿದಾಬೇಗಂ ರವರು ನ್ಯಾಯಾಲಯಕ್ಕೆ ಹಾಜರಾಗದೆ ವಜಾಗೊಂಡಿರುತ್ತದೆಯೇ ಎಂದು ತಿಳಿದುಕೊಳ್ಳಲು ನೀವು ಪ್ರಯತ್ನಿಸಿರುತ್ತೀರಾ ಎಂದರೆ ನನಗೆ ಅದರ ಬಗ್ಗೆ ಗೊತ್ತಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಮಿಸ್ ನಂಬರ 369/1981 ರಲ್ಲಿ ಪಿ.ಟಿ ಹಬೀಬರವರು ಪಕ್ಷಗಾರರು ಆಗಿದ್ದರು ಎಂದರೆ ಇರಬಹುದು ಮುಂದುವರೆದು ನನಗೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ಶ್ರೀ.ಐ.ಜಿ. ಹಿರೇಗೌಡರ ವಕೀಲರು ಇದ್ದರು ಇರಬಹುದು ನನಗೆ ನೆನಪು ಇರುವುದಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಮಿಸ್ ನಂಬರ 369/1981 ರಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ 6 ಆಗಿದ್ದು, ಅದರಲ್ಲಿ ಅರ್ಜಿದಾರರ ಪರವಾಗಿ ಮಾಡಿರುವವರ ಸಹಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಅದು ಶ್ರೀ.ಐ.ಜಿ ಹಿರೇಗೌಡರವರ ಸಹಿ ಇರಬಹುದು, ನನಗೆ ಅಷ್ಟು ನೆನಪು ಇಲ್ಲ ಎಂದು ನುಡಿಯುತ್ತಾರೆ. ಸದರಿ ಸಹಿಯನ್ನು ನಿಪಿ.127 ಎಂದು ಗುರುತಿಸಲಾಯಿತು. ಸದರಿ ಮಿಸ್ ನಂಬರ 369/1981 ರಲ್ಲಿ ಕುಂಬಾರವಾಡ ಮಸ್ಜಿದ್ ನ ಮುತವಲ್ಲಿರವರು ಮೃತ್ಯು ಪತ್ರವನ್ನು ಖೊಟ್ಟಿ ಸಹಿ ಮಾಡಿ ಸೃಷ್ಟಿಸಿ ಪ್ರೋಬೇಟ್ ಆದೇಶವನ್ನು ಪಡೆದಿದ್ದರ ಬಗ್ಗೆ, ಸದರಿ ಮೃತ್ಯು ಪತ್ರವನ್ನು ವೈಜ್ಞಾನಿಕ, ತಜ್ಞರ ಪರೀಕ್ಷೆಗೆ ಕಳುಹಿಸುವಂತೆ ಕೋರಿ ಸಾಜಿದಾ ಬೇಗಂ ರವರು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ನೆನಪು ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನ್ಯಾಯಾಲಯವು ಸದರಿ ಅರ್ಜಿಯ ಮೇಲೆ ಆದೇಶ ಮಾಡಿ ಮೃತ್ಯು ಪತ್ರವನ್ನು ತಜ್ಞರ ಪರೀಕ್ಷೆಗೆ ಕಳುಹಿಸಿದರು ಎಂದರೆ ನನಗೆ ನೆನಪು ಇರುವುದಿಲ್ಲ. ಸದರಿ ಮೃತ್ಯು ಪತ್ರವು ತಜ್ಞರ ಪರೀಕ್ಷೆಗೆ ಹೋಗಿ ಅದರಲ್ಲಿದ್ದ ಸಹಿಗಳು ನವಾಜಖಾತುರವರಿಗೆ ಸಂಬಂಧಪಟ್ಟಿದ್ದಲ್ಲ ಎಂದು ವರದಿ ನೀಡಿರುತ್ತಾರೆ ಎಂದರೆ ಸುಳ್ಳು ಇರುತ್ತದೆ. ಸದರಿ ವರದಿಯು ಸಾಕ್ಷಿಗಳ ವಿಚಾರಣೆಯಾಗುವ ಪೂರ್ವದಲ್ಲಿಯೇ ಬಂದಿರುತ್ತದೆ ಎಂದರೆ ಸುಳ್ಳು ಇರುತ್ತದೆ. ತಜ್ಞರ ವರದಿ ಬಂದ ಕೂಡಲೆ, ಕುಂಬಾರವಾಡ ಮಸ್ಜಿದ್ ರವರು ನಿಮ್ಮ ಜೊತೆ ರಾಜಿಗೆ ಬಂದರು ಎಂದರೆ ನನಗೆ ನೆನಪು ಇರುವುದಿಲ್ಲ. ತಜ್ಞರ ವರದಿ ಬಂದ ನಂತರ ಮತ್ತು ಸಾಕ್ಷ್ಯ ವಿಚಾರಣೆ ಮಾಡುವ ಅವಧಿಯಲ್ಲಿ ಕುಂಬಾರವಾಡ ಮಸ್ಜಿದ್ ರವರು ನಿಮ್ಮ ಜೊತೆ ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ಇಲ್ಲ ರಾಜಿಯಾಗುವ ಪ್ರಶ್ನೆಯೇ ಬರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಸಿ.ಟಿ ಸರ್ವೇ ನಂಬರ 184 ಅನ್ನು

ನೀವು ಕುಂಬಾರವಾಡ ಮಸ್ಜಿದ್ ಗೆ ಬಿಟ್ಟುಕೊಟ್ಟಿರುತ್ತೀರಾ ಎಂದರೆ ನಾವು ಬಿಟ್ಟುಕೊಟ್ಟಿರುವುದಿಲ್ಲ ಮುಂದುವರೆದು ನವಾಜಖಾತುರವರೆ ಬಿಟ್ಟುಕೊಟ್ಟಿರುತ್ತಾರೆ ಎಂದು ಸಾಕ್ಷಿಯು ನುಡಿಯುತ್ತಾರೆ.

ಮಿಸ್ ನಂಬರ 369/1981 ರಲ್ಲಿ ನವಾಜಖಾತುರವರು ಪಕ್ಷಗಾರರಾಗಿ ಇರಲಿಲ್ಲ ಎಂದರೆ ನನಗೆ ನೆನಪು ಇರುವುದಿಲ್ಲ. ನೀವು ಪ್ರತಿವಾದ ಪತ್ರದ ಹಾಜರುಪಡಿಸಿದ ವಂಶಾವಳಿಯಲ್ಲಿ ನವಾಜಖಾತುರವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನಮೂದಿಸಿರುತ್ತೀರಿ ಎಂದರೆ ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ವಂಶಾವಳಿಯಲ್ಲಿ ನವಾಜಖಾತು ರವರ 1968 ರಲ್ಲಿ ಮರಣ ಹೊಂದಿರುತ್ತಾರೆ ಎಂದು ನಮೂದು ಮಾಡಿದ್ದೇವೆ ಎಂದು ನುಡಿಯುತ್ತಾರೆ. ನವಾಜಖಾತುರವರ ಮರಣ ಪ್ರಮಾಣ ಪತ್ರ ಹಾಜರುಪಡಿಸಿದ್ದೇನೆ. ಕುಂಬಾರವಾಡ ಮಸ್ಜಿದ್ ಮತ್ತು ನವಾಜಖಾತುರವರ ನಡುವೆ 1968 ರ ಪೂರ್ವದಲ್ಲಿ ಯಾವುದೇ ದಾವೆ ಅಥವಾ ಪ್ರಕರಣಗಳು ವಿಚಾರಣೆಗೆ ಇರಲಿಲ್ಲ ಎಂದರೆ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ.

ಕುಂಬಾರವಾಡ ಮಸ್ಜಿದ್ ರವರು ಶಹಜಾದಬೇಗಂ ರವರ ವಿರುದ್ಧ ಮೊದಲ ಸಲ ಸಲ್ಲಿಸಿದ ಅರ್ಜಿ ಸಂಖ್ಯೆ 8/1979 ಇರುತ್ತದೆ ಎಂದರೆ ನೆನಪು ಇರುವುದಿಲ್ಲ. ನಂತರ ಶಹಜಾದ ಬೇಗಂ ರವರು ಓ.ಎಸ್ ನಂಬರ 171/1984 ಅನ್ನು ಹೂಡಿದ್ದರು ಎಂದರೆ ಸರಿ. ಕುಂಬಾರವಾಡ ಮಸ್ಜಿದ್ ನ್ನು ಪ್ರತಿನಿಧಿಸುತ್ತಿದ್ದವರು ಇಂಡಸ್ಗೇರಿರವರು ಎಂದರೆ ಸರಿ.

ಓ.ಎಸ್ ನಂಬರ 171/1984 ರಲ್ಲಿ ಕುಂಬಾರವಾಡ ಮಸ್ಜಿದ್ ರವರು ಪಕ್ಷಗಾರರನ್ನಾಗಿ ಮಾಡಿದ್ದೀರೋ ಅಥವಾ ಇಲ್ಲವೋ ಎಂದರೆ ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಓ.ಎಸ್ ನಂಬರ 171/1984 ರಲ್ಲಿ ಯಾರ್ಯಾರು ಪಕ್ಷಗಾರರು ಇದ್ದರು ಎಂದರೆ ಡಿ.ಸಿ, ಪಿ.ಟಿ ಹಬೀಬ ಮತ್ತು ಕುಂಬಾರವಾಡ ಮಸ್ಜಿದ್ ರವರು ಇದ್ದರು, ಕುಂಬಾರವಾಡ ಮಸ್ಜಿದ್ ರವರನ್ನು ನಾವು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ. ಓ.ಎಸ್ ನಂಬರ 171/1984 ರಲ್ಲಿ ಅಂತಿಮ ಆದೇಶವಾದ ನಂತರ ಸದರಿ ಆದೇಶವನ್ನು ಸಿ.ಟಿ ಸರ್ವೇ ನಂಬರ 184 ಕ್ಕೆ ಸಂಬಂಧಪಟ್ಟಂತೆ ಪ್ರಶ್ನಿಸಿ ಹಾವೇರಿ ಹಿರಿಯ ದಿವಾಣಿ ನ್ಯಾಯಾಶಧೀರಲ್ಲಿ ಆರ್.ಎ ನಂಬರ 73/1994 ಅನ್ನು ಹೂಡಿದ್ದರು ಎಂದರೆ ಸರಿ. ಸದರಿ ಆರ್.ಎ ನಂಬರ 73/1994 ರಲ್ಲಿ ಓ.ಎಸ್ ನಂಬರ 171/1984 ರಲ್ಲಿ ಆದ ಅಂತಿಮ ಆದೇಶವನ್ನು ಖಾಯಂಆಗಿ ಮಾಡಿರುತ್ತಾರೆ. ಸದರಿ ಆರ್.ಎ ನಂಬರ 73/1994

ರಲ್ಲಿ ಇಂಡಸ್ಗೇರಿ ಮತ್ತು ಶಹಜಾದ ಬೇಗಂ ರವರು ರಾಜಿಯಾಗಿದ್ದರೋ ಅಥವಾ ಇಲ್ಲವೋ ಎಂದರೆ ಸಾಕ್ಷಿಯು ಒಂದು ಆಸ್ತಿಗೆ ಸಂಬಂಧಪಟ್ಟಂತೆ ಮಾತ್ರ ಅಂದರೆ ನವಾಜಖಾತುರವರು ಕುಂಬಾರವಾಡ ಮಸ್ಜಿದ್ ರವರಿಗೆ ಬಿಟ್ಟುಕೊಟ್ಟ ಆಸ್ತಿಗೆ ಸಂಬಂಧಪಟ್ಟಂತೆ ರಾಜಿಯಾಗಿರುತ್ತಾರೆ. ಸದರಿ ಅಸಲು ದಾವೆ ಸಂಖ್ಯೆ 171/1984 ರಲ್ಲಿ ಮತ್ತು ಆರ್.ಎ ನಂಬರ 73/1994 ರಲ್ಲಿ ನವಾಜಖಾತುರವರು ವೈಯಕ್ತಿಕವಾಗಿ ಪಕ್ಷಗಾರರಾಗಿ ಇದ್ದರೋ ಅಥವಾ ಇಲ್ಲವೋ ಎಂದರೆ ವೈಯಕ್ತಿಕವಾಗಿ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನವಾಜಖಾತುರವರು ಸಿ.ಟಿ ಸರ್ವೇ ನಂಬರ 184 ಅನ್ನು ಕುಂಬಾರವಾಡ ಮಸ್ಜಿದ್ ರವರಿಗೆ ಬಿಟ್ಟುಕೊಟ್ಟಿರುವುದರ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದರೆ ದಾಖಲೆಗಳು ಇರುತ್ತವೆ, ಅದು ಎಂದರೆ ಒಂದು ವಿಲ್ (ಮೃತ್ಯು ಪತ್ರ) ಆಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ನೀವು ಹೇಳುವ ವಿಲ್ ಸದರಿ ಮಿಸ್ ನಂಬರ 369/1981 ಹಾಗು P & Sc 8/1979 ಆದರಿಸುವ ವಿಲ್ ಆಗಿರುತ್ತದೆಯೇ ಎಂದರೆ ನನಗೆ ನೆನಪು ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಮುಂದುವರೆದು ಸದರಿ ವಿಲ್ ಆರ್.ಎ ನಂಬರ 73/1994 ರಲ್ಲಿ ಇದ್ದ ವಿಲ್ ಆಗಿರುತ್ತದೆ. ಶಹಜಾದ ಬೇಗಂ ಮತ್ತು ಕುಂಬಾರವಾಡ ಮಸ್ಜಿದ್ ರವರು ಆರ್.ಎ 73/1994 ರಲ್ಲಿ ಸಲ್ಲಿಸಿದ ರಾಜಿ ಅರ್ಜಿಯಲ್ಲಿ P & Sc 8/1979 ರಲ್ಲಿ ಆದರಿಸಿದಂತಹ ವಿಲ್ ಗೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದರೆ ಸರಿಯಲ್ಲ, ಸದರಿ ವಿಲ್ ಆರ್.ಎ ನಂಬರ 73/1994 ರಲ್ಲಿ ಆದ ವಿಲ್ ಗೆ ಸಂಬಂಧಪಟ್ಟಿದ್ದಾಗಿರುತ್ತದೆ. ಶಹಜಾದ ಬೇಗಂ ಮತ್ತು ಕುಂಬಾರವಾಡ ಮಸ್ಜಿದ ರವರು ಆರ್.ಎ ನಂಬರ 73/1994 ರಲ್ಲಿ ಸಲ್ಲಿಸಿದ ರಾಜಿ ಅರ್ಜಿಯಲ್ಲಿ P & Sc 8/1979 ರಲ್ಲಿ ಉಲ್ಲೇಖಿಸಿದ ವಿಲ್ ನ ಬಗ್ಗೆ ಸದರಿ ರಾಜಿ ಅರ್ಜಿಯಲ್ಲಿಯೂ ಸಹ ಉಲ್ಲೇಖಿಸಿರುತ್ತಾರೆ ಎಂದರೆ ನನಗೆ ನೆನಪು ಇರುವುದಿಲ್ಲ ಮುಂದುವರೆದು ಆರ್.ಎ 73/1994 ರಲ್ಲಿ ಆದ ವಿಲ್ ಬೇರೆ ಇರುತ್ತದೆ ಎಂದು ನುಡಿಯುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ಆರ್.ಎ ನಂಬರ 73/1994 ರಲ್ಲಿ ಸಲ್ಲಿಸಿದ ರಾಜಿ ಅರ್ಜಿಯಾಗಿದ್ದು, ಅದರಲ್ಲಿರುವ ಪ್ರಮಾಣ ಪತ್ರದಲ್ಲಿ ಒಂದು ಸಹಿ ಇದ್ದು, ಅದನ್ನು ಸಾಕ್ಷಿಯು ದಾಖಲೆಯನ್ನು ಪರಿಶೀಲಿಸಿ ಒಂದು ಸಹಿ ಶಹಜಾದ ಬೇಗಂ ರವರದ್ದಾಗಿದ್ದು, ಮತ್ತು ಮತ್ತೊಂದು ಸಹಿ ತನ್ನದೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಹಿಗಳನ್ನು ನಿಪಿ.128 ಮತ್ತು ನಿಪಿ.128(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.